ಆ) ಬಂದಿದೆ

ಇ) ಪರಿಶೀಲನೆಯಲ್ಲಿದೆ

**995 (1113) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು)** ಮಾನ್ಯ ಜಲಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಭದ್ರಾ ಜಲಾಶಯ ನಾಲೆಯ ಆಧುನೀಕರಣ ಕಾಮಗಾರಿಗಳು ಯಾವ ಹಂತದಲ್ಲಿವೆ,

ಆ) ಇದರ ಅಂದಾಜು ವೆಚ್ಚವೆಷ್ಟು,

ಇ) ನಿಗದಿಪಡಿಸಿದ ಅನುದಾನವೆಷ್ಟು?

**ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)**

ಅ) ಭದ್ರಾ ಆಧುನೀಕರಣ ಯೋಜನೆಯ ಅಂದಾಜು ವೆಚ್ಚ ರೂ 471 00 ಕೋಟಿಗಳು, ಈ ಆಧುನೀಕರಣ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೊಳ್ಳಲು ಯೋಜಿಸಲಾಗಿದೆ

ಆ) 2005–06ನೇ ಸಾಲಿನಲ್ಲಿ ರೂ 12 30 ಕೋಟಿ ಮೊತ್ತದ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ 2006–07ನೇ ಸಾಲಿನಲ್ಲಿ ರೂ 82 92 ಕೋಟಿ ಮೊತ್ತದ 674 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಇದರಲ್ಲಿ 234 ಕಾಮಗಾರಿಗಳು ಪೂರ್ಣಗೊಂಡಿವೆ ಹಾಗೂ ಉಳಿದ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿವೆ

ಇ) 2006–07ನೇ ಸಾಲಿನಲ್ಲಿ ಭದ್ರಾ ಆಧುನೀಕರಣ ಕಾಮಗಾರಿಗೆ ರೂ 45 15 ಕೋಟಿ ಅನುದಾನ ಒದಗಿಸಲಾಗಿದ್ದು ಈವರೆಗೆ ರೂ 14 96 ಕೋಟಿ ವೆಚ್ಚ ಮಾಡಲಾಗಿದೆ

**996 (1114) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) 2006–07ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾದ ಸರ್ಕಾರಿ ಪ್ರೌಢಶಾಲೆಗಳಿಗೆ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಲಾಗಿದೆಯೇ,

ಆ) ಮಾಡಿದ್ದಲ್ಲಿ, 2006–07ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾದ ಸರ್ಕಾರಿ ಪ್ರೌಢಶಾಲೆಗಳಿಗೆ ಕಟ್ಟಡಗಳನ್ನು ಮಂಜೂರು ಮಾಡಲಾಗಿದೆಯೇ?

**ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)**

ಅ) ಹೌದು

485 ಮುಖ್ಯ ಶಿಕ್ಷಕರ 970 ಸಹ ಶಿಕ್ಷಕರ ಹಾಗೂ 485 "ಡಿ" ಗ್ರೂಪ್ ದರ್ಜೆ ನೌಕರರ ಹುದ್ದೆಗಳು ಮಂಜೂರಾಗಿದೆ

ಆ) 2006–07ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾದ 485 ಪ್ರೌಢಶಾಲೆಗಳಲ್ಲಿ 276 ಪ್ರೌಢಶಾಲೆಗಳಿಗೆ ಆರ್ ಐ ಡಿ ಎಫ್ 12ರಡಿಯಲ್ಲಿ ಕೊರಡಿಗಳ ಮಂಜೂರಾತಿ ಪ್ರಸ್ತಾವನೆಯು ಸರ್ಕಾರದ ವರಿಶೀಲನೆಯಲ್ಲಿದೆ

**997 (1115) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಗುಲ್ಬರ್ಗಾ ವಿಭಾಗದಲ್ಲಿ ಒಟ್ಟು ಮಂಜೂರಾದ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು,

ಆ) ಇಲ್ಲಿಯವರೆಗೆ, ಈ ಹುದ್ದೆಗಳಿಗೆ ತುಂಬಿರುವ ಶಿಕ್ಷಕರ ಸಂಖ್ಯೆ ಎಷ್ಟು,

ಇ) ಎಷ್ಟು ಹುದ್ದೆಗಳು ಖಾಲಿ ಇವೆ, ಇವುಗಳನ್ನು ಯಾವಾಗ ತುಂಬುವ ಉದ್ದೇಶ ಸರ್ಕಾರಕ್ಕೆ ಇದೆ?

**ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)**

ಅ) ಗುಲ್ಬರ್ಗಾ ವಿಭಾಗದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ 34,767 ಶಿಕ್ಷಕರ ಹುದ್ದೆಗಳು ಮತ್ತು ಸರ್ಕಾರಿ ಪ್ರೌಢಶಾಲೆಗಳಿಗೆ 8340 ಶಿಕ್ಷಕರ ಹುದ್ದೆಗಳು ಮಂಜೂರಾಗಿದೆ

ಆ) ಇಲ್ಲಿಯವರೆವಿಗೆ 31,810 ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಮತ್ತು 6515 ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ

ಇ) ಪ್ರಸ್ತುತ 2805 ಸರ್ಕಾರಿ ಪ್ರಾಥಮಿಕ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಸದರಿ ಹುದ್ದೆಗಳನ್ನು ಭರ್ತಿ ಮಾಡುವ ವಿಚಾರದಲ್ಲಿ ಈಗಾಗಲೇ ದಿ 11 01 2007 ರಂದು ಅಧಿಸೂಚನೆ ಹೊರಡಿಸಲಾಗಿದೆ ಇದರ ಜೊತೆಗೆ ದಿ 01 02 2007 ರಲ್ಲಿ 152 ವಿಶೇಷ ಶಿಕ್ಷಕರನ್ನು ನೇಮಕಾತಿ ಮಾಡಲು ಅಧಿಸೂಚನೆ ಹೊರಡಿಸಲಾಗಿದೆ

ಪ್ರಸ್ತುತ 1665 ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಇದರಲ್ಲಿ 1522 ಹುದ್ದೆಗಳು 2006–07ನೇ ಸಾಲಿನಲ್ಲಿ ನೇಮಕಾತಿಗಾಗಿ